

ಡಾಂಬರ್ ರಸ್ತೆಯನ್ನು ಹಾದು ಹೋಗುವ ಕ್ರಮವಾಗಲಿ, ವೇಗವಾಗಿ ಬರುವ ವಾಹನಗಳ ರಭಸವಾಗಲಿ ಅವಕ್ಕೆ ಅರ್ಥವಾಗುವುದಿಲ್ಲ. ಈ ಧಾವಂತದಲ್ಲಿ ಅವು ಸಾವಿಗೀಡಾಗುವುದು ಹೆಚ್ಚಾಗಿದೆ. ಅದಕ್ಕಾಗಿ ಇಲ್ಲಿನ ಸರ್ಕಾರ ಅವು ರಸ್ತೆ ದಾಟುವ ಜಾಗೆಯಲ್ಲಿ ಮರದಿಂದ ಮರಕ್ಕೆ ಹಗ್ಗದ ತೂಗು ಸೇತುವೆಗಳನ್ನು ನಿರ್ಮಿಸಿದೆ. ಇವುಗಳ ಮೂಲಕ ಹೋಗಿ ಬರುವ ಅಭ್ಯಾಸ ಇವಕ್ಕಿದ್ದರೂ ಪ್ರವಾಸಿಗರು ನೀಡುವ ತಿಂಡಿಯಾಸೆಗೆ ಇವು ರಸ್ತೆಗೆ ಇಳಿದು ಬಿಡುತ್ತವೆ.

ಆ ವಾಚರ್ ಹೇಳಿದ ಹಾಗೆ ಜನ ಆಹಾರ ಕೊಟ್ಟು ಕಾಡು ಪ್ರಾಣಿಗಳ ಸಹಜ ಬದುಕನ್ನು ವಿನಾಶಕ್ಕೆ ತಳ್ಳಿದ್ದಾರೆ. ಕಾಡಿನಲ್ಲಿ ಕಾಲಕಾಲಕ್ಕೆ ಸಿಗುವ ಬಳ್ಳಿಯ ಚಿಗುರು ಸೊಪ್ಪು, ಹೂವು, ಕಾಯಿ, ತಿನ್ನುವ ತಮ್ಮ ಸಂಪ್ರದಾಯವನ್ನು ಬಿಟ್ಟು ಜನರು ಎಸೆಯುವ ಬಾಳೆಹಣ್ಣು, ಕಡ್ಲೆಬೀಜ, ಬ್ರೆಡ್ಡು, ರಸ್ಕು, ಚಾಕ್ಲೇಟ್, ತಂಪು ಪಾನೀಯಗಳ ಜೊತೆಗೆ ಅಪರೂಪಕ್ಕೆ ಬೀರಿನ ಬಾಟಲಿಯ ರುಚಿಯನ್ನೂ ಸವಿಯುವ ಹಂತಕ್ಕೆ ಬಂದಿವೆ.

ನಮ್ಮ ಶಿವಮೊಗ್ಗದ ಸಕ್ರೆಬೈಲಿನ ಕಾಡಿನಲ್ಲಿ ಹಾದು ಹೋದ ತೀರ್ಥಹಳ್ಳಿ ರಸ್ತೆಯಲ್ಲೂ ಕೆಂಪುಮೂತಿ ಕೋತಿಗಳು ಟಾರು ರಸ್ತೆಯ ಹಂಪ್ ಇರುವ ಜಾಗೆಯಲ್ಲೇ ಠಿಕಾಣಿ ಹೂಡಿರುತ್ತವೆ. ಜನ ಬಂದು ಅಲ್ಲಿ ಕಾರು ನಿಲ್ಲಿಸಿ ದಾನಶೂರರಂತೆ ತಿಂಡಿಕೊಟ್ಟು ಅವುಗಳ ಸಹಜ ಜೀವನ ಪದ್ಧತಿಯನ್ನೇ ನಾಶ ಮಾಡಿದ್ದಾರೆ. ದಾರಿಹೋಕರು ಹೀಗೆ ಕಾಡು ಪ್ರಾಣಿಗಳಿಗೆ ಆಹಾರ ಎಸೆಯುವುದು ಪುಣ್ಯದ ಕೆಲಸವೆಂದು ಅನೇಕರು ತಪ್ಪಾಗಿ ತಿಳಿದಿದ್ದಾರೆ. ಅನೇಕ ಸಲ ಇದೇ ಆಸೆಯಿಂದ ಕಾರುಗಳ ಕಂಡೊಡನೆ ಹಾರಿ ಓಡೋಡಿ ಬರುವ ಮಂಗಗಳು ಎದುರಿನಿಂದ ವೇಗವಾಗಿ ಬರುವ ಬೇರೆ ವಾಹನಕ್ಕೆ ಸಿಕ್ಕು ಸಾಯುತ್ತಿವೆ. ಇಲ್ಲವೇ ಉಳಿದರೂ ಕೈ ಕಾಲು ಕಳೆದುಕೊಂಡು ಅಂಗವಿಕಲವಾಗಿ ಬದುಕುತ್ತಿವೆ.

ಇನ್ನೂ ಬದುಕಿನ ರೀತಿ ನೀತಿಯೇ ಕಲಿಯದ ಸಣ್ಣ ಮರಿಗಳು ಬೇಕಾಬಿಟ್ಟಿಯಾಗಿ ಜೀವ ಬಿಡುತ್ತಿವೆ. ಇವು ಇನ್ನೆಂದೂ ಕಾಡಿಗೆ ಆಹಾರ ಹುಡುಕಿಕೊಂಡು ಹೋಗದಷ್ಟು ನಾವೇ ಇವುಗಳ ಸ್ವಭಾವ ಹದಗೆಡಿಸಿ ಇಟ್ಟಿದ್ದೇವೆ. ಇನ್ನೂ ಪ್ರವಾಸಿ ಸ್ಥಳಗಳಲ್ಲಂತೂ ಹೇಳುವುದೇ ಬೇಡ. ಕೋತಿಗಳ ವರ್ತನೆ ರೌಡಿಸಂ ಮಟ್ಟಕ್ಕೆ ಬಂದು ಮುಟ್ಟಿದೆ. ಬಾದಾಮಿಯಲ್ಲಂತೂ ಒಂದು ಮಂಗ ಅಕ್ಷರಶಃ ನನ್ನ ಮೇಲೆ ನೀರಿನ ಬಾಟಲಿ ಕೊಡಲಿಲ್ಲವೆಂದು ದಾಳಿಯೇ ಮಾಡಿತ್ತು. ನಾನು